ಸಾಕ್ಷಿಯನ್ನು ದಿಃ**19.09.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ**.**ಬಿ**.**ಆರ್**.**ಆರ್**.** ವಕೀಲರಿಂದ**:**

ನಮ್ಮ ತಂದೆಯ ಕುಟುಂಬದಲ್ಲಿ ವಿಭಾಗ ಆಗಿದೆ ಎಂದು ಹೇಳುವ ಸಮಯದಲ್ಲಿ ನಾನು ಅಪ್ರಾಪ್ತನಿದ್ದೆ. ನಾನು ವಿಭಾಗದ ಕುರಿತು ನನ್ನ ತಂದೆಯಿಂದ ತಿಳಿದುಕೊಂಡಿರುತ್ತೇನೆ. ಸದರಿ ವಿಭಾಗದಂತೆ ನನ್ನ ತಂದೆಗೆ ಎಷ್ಟು ಆಸ್ತಿಗಳು ಬಂದಿದ್ದವು ಎಂದರೆ ಸಾಕ್ಷಿಯು ಕೆಲವು ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ವಿಭಾಗದ ಆಧಾರದ ಮೇಲೆ ದಾವಾ ಆಸ್ತಿಯ ಕುರಿತು ಮ್ಯೂಟೇಷನ್ ಆಗಿರಲಿಲ್ಲ. ದಾವಾ ಆಸ್ತಿ ನಮ್ಮ ತಂದೆಯ ಭಾಗಕ್ಕೆ ಬಂದಿತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ದಾವಾ ಆಸ್ತಿಯಲ್ಲಿ ನನ್ನ ತಂದೆ ಅವರ ಮರಣಾ ನಂತರ ನಾವು ಸ್ವಾಧೀನಾನುಭವದಲ್ಲಿದ್ದೇವೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಆಸ್ತಿ ಹಾಗೂ ಅದರಲ್ಲಿ ಮನೆ ಇರುವ ಕುರಿತು ವಿದ್ಯುತ್ ಬಿಲ್ ಇರುತ್ತದೆ.

ನನ್ನ ಪ್ರಕಾರ ನಾವು ವಾಸಿಸುವ ಮನೆ ಕಂದಾಯ ಭೂಮಿಯಲ್ಲಿ ಬರುತ್ತದೆ. ನಮ್ಮ ತಾತನ ಕ್ರಯಪತ್ರದ ಚೆಕ್ಕು ಬಂದಿಗೂ ಹಾಗೂ ದಾವಾ ಆಸ್ತಿಯ ಚೆಕ್ಕು ಬಂದಿ ಒಂದೇ ಇರುತ್ತದೆ, ಆದರೆ ಈಗ ಅವರವರ ಕುಟುಂಬದವರ ಅಂದರೆ ವಂಶಸ್ಥರ ಮುಂದಿನ ತಲೆಮಾರಿನವರ ಒಡೆತನವಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.3 ನ್ನು

ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ.3 ರಲ್ಲಿ ದಾವಾ ಆಸ್ತಿಯ ಪಶ್ಚಿಮ ಹಾಗೂ ಉತ್ತರಕ್ಕೆ ತೊರೆ ಹಳ್ಳ ಇದೆ ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ. ದಾವೆ ಹೂಡುವ ಸಮಯದಲ್ಲಿ ನಿಪಿ.3 ರಲ್ಲಿ ತೋರಿಸಿರುವ ಮೇಲೆ ಹೇಳಿದ ತೊರೆ ಹಳ್ಳ ಇದೆಯೇ ಎಂದರೆ ಸಾಕ್ಷಿಯು ದಾವಾ ಆಸ್ತಿಯಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ.

ಖಾತಾ ನಂ.110/90 ವಿಸ್ತೀರ್ಣ 58X110 ಪೂರ್ವಕ್ಕೆ: ರೇವಣ್ಣರವರ ಮನೆ, ಪಶ್ಚಿಮಕ್ಕೆ: ಬಸಮ್ಮರವರು ಖಾಲಿ ನಿವೇಶನ, ಉತ್ತರಕ್ಕೆ: ಮಹದೇವಮ್ಮ ದೇವರ ದೇವಸ್ಥಾನ ಮತ್ತು ದಕ್ಷಿಣಕ್ಕೆ:ಚಿಕ್ಕಣ್ಣ ಮತ್ತು ಗಂಗಪ್ಪರವರ ಮನೆ ಇರುವ ಆಸ್ತಿಯನ್ನು ನಾನು ನೋಡಿರುವುದಿಲ್ಲ. ಈ ಮೇಲಿನ ಆಸ್ತಿಗೆ 1 ನೇ ಪ್ರತಿವಾದಿ ನನ್ನ ತಂದೆಯ ವಿರುದ್ಧ ದಾವಾ ಸಂಖ್ಯೆ:141/2011 ನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ಉಭಯ ಪಕ್ಷಗಳ ವಾದವಿವಾದಗಳನ್ನು ಆಲಿಸಿ ನ್ಯಾಯಾಲಯ ನನ್ನ ತಂದೆಯ ವಿರುದ್ಧ ಡಿಕ್ರಿ ಮಾಡಿರುತ್ತದೆ ಎಂದರೆ ಸರಿ. ಸದರಿ ಡಿಕ್ರಿಯ ವಿರುದ್ಧ ಯಾವುದೇ ಅಪೀಲು ಸಲ್ಲಿಸಿರುವುದಿಲ್ಲ. ನನ್ನ ಪ್ರಕಾರ ಮೇಲೆ ಹೇಳಿದ ಡಿಕ್ರಿಯಾದ ಆಸ್ತಿ ನಮ್ಮ ದಾವಾ ಆಸ್ತಿಯ ಒಳಗೆ ಬರುವುದಿಲ್ಲ. ದಾವಾ ಆಸ್ತಿ ಅಸ್ತಿತ್ವದಲ್ಲಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕು ಬಂದಿಗೆ ಸಂಬಂಧಿಸಿದಂತೆ ಸ್ಕೆಚ್ ಹಾಗೂ ನಿಪಿ.3 ನ್ನು ಹಾಜರುಪಡಿಸಿರುತ್ತೇನೆ.

ನಿಪಿ.6 ರಲ್ಲಿ ಸರ್ವೇ ನಂ.127/3 ಡಿ ಉತ್ತರ ಹಾಗೂ ಪೂರ್ವಕ್ಕೆ ಚುಕ್ಕಿ ಇಟ್ಟು

ತೋರಿಸಿರುವ ಗುರುತು ಎರಡು ರಸ್ತೆಗಳಾಗಿರುತ್ತವೆ ಎಂದರೆ ಸರಿ. ಸದರಿ ಎರಡು ರಸ್ತೆಗಳು ನಿಪಿ.6 ರ ಪ್ರಕಾರ ಜಮೀನಿನ ಒಳ ಭಾಗದಲ್ಲಿ ಬರುತ್ತದೆ ಎಂದರೆ ಸರಿ. ಸದರಿ ಎರಡು ರಸ್ತೆಗಳು ಬಂದ ಕಾರಣ 34 ಗುಂಟೆ 3 ಪೀಸುಗಳಾಗಿರುತ್ತವೆ. ಸದರಿ 34 ಗುಂಟೆಯಲ್ಲಿ 3 ಗುಂಟೆ ರಸ್ತೆಗೆಂದು ಕಡಿತವಾಗಿರುತ್ತದೆ. ದಾವಾ ಆಸ್ತಿಯಲ್ಲಿ 2 ರಸ್ತೆಗಳು ಹಾಗೂ ರಸ್ತೆಗೆ 3 ಗುಂಟೆ ಹೋದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 3 ಪೀಸುಗಳಾದ ಬಗ್ಗೆ ಪ್ರತ್ಯೇಕ ಚೆಕ್ಕು ಬಂದಿ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.6 ರ 127/3 ಸಿ ಆಸ್ತಿ ಮಾಲೀಕರು ನಮ್ಮ ದೊಡ್ಡ ತಾತನ ಸೊಸೆ ಜಯಮ್ಮರವರದ್ದಾಗಿರುತ್ತದೆ.

ಹೊನ್ನಯ್ಯ ಬಿನ್ ಕಪನಯ್ಯ ಎಂದರೆ ನನ್ನ ದೊಡ್ಡಪ್ಪ. ಜಯಮ್ಮನವರು ಹೊನ್ನಯ್ಯ ಬಿನ್ ಕಪನಯ್ಯನವರಿಗೆ ಸೊಸೆಯಾಗಬೇಕು ಎಂದು ನುಡಿಯುತ್ತಾರೆ. ನಿಪಿ.6 ರ ದಕ್ಷಿಣಕ್ಕೆ ಗ್ರಾಮಠಾಣಾ ಎಂದು ನಮೂದು ಇದೆ ಎಂದರೆ ಸರಿ. ಅದೇ ರೀತಿ ಸರ್ವೇ ನಂ.127/3 ಡಿ ರ ಪಶ್ಚಿಮಕ್ಕೆ ಭದ್ರಯ್ಯ, ಪಾಪಯ್ಯನವರ ವಂಶಸ್ಥರ ಜಮೀನು ಇದೆ ಎಂದು ನುಡಿಯುತ್ತಾರೆ. ನಿಪಿ.6 ರ ಪ್ರಕಾರ ದಾವಾ ಆಸ್ತಿಯ ಪಶ್ಚಿಮಕ್ಕೆ ಗ್ರಾಮಠಾಣಾ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪಾಪಯ್ಯರವರ ವಂಶಸ್ಥರು ಇದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಚೆಕ್ಕು ಬಂದಿ ಮತ್ತು ವಿಸ್ತೀರ್ಣ

ಕಾಲ್ಪನಿಕವಾಗಿರುತ್ತದೆ ಎಂದರೆ ಸರಿಯಲ್ಲ. ಸಾರ್ವಜನಿಕ ರಸ್ತೆ ಹಾಗೂ ತೊರೆ ಜೊತೆಗೆ ಪ್ರತಿವಾದಿಗಳ ಆಸ್ತಿಯನ್ನು ಲಪಟಾಯಿಸಲು ಸುಳ್ಳು ಚೆಕ್ಕು ಬಂದಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅಸ್ತಿತ್ವದಲ್ಲಿಲ್ಲದ ಕಾರಣ ಪ್ರತಿವಾದಿಗಳು ತೊಂದರೆ ನೀಡುವ ಪ್ರಶ್ನೆ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.